ಕೋಟಿ ರೂಪಾಯಿಗಳು ಎಲ್ಲಾ ಸೇರಿ ಹೆಚ್ಚೂ ಕಡಿಮೆ ೯೦೦ ಕೋಟಿ ರೂಪಾಯಿಗಳು ವರ್ಗಾವಣೆ ಯಾಗುತ್ತದೆ ಎಂದು ಹೇಳಿಕೆಯನ್ನು ಕೊಟ್ಟಿದ್ದೇನೆ. ಈ ಯೋಜನೆಗೆ ಯೋಜನಾ ಆಯೋಗ ಮಂಜೂರಾತಿ ಕೊಡುವುದರಿಂದ ಮತ್ತೆ ಯೋಜನಾ ಆಯೋಗದ ಅನುಮತಿ ಬೇಕಾಗಿಲ್ಲ. ಮುಂದೆ ಬರತಕ್ಕಂತಹ ಬಜೆಟ್ಟಿನಲ್ಲಿ ಯಾವ ಯಾವ ಬಾಬಿನ ಹಣವನ್ನು ಯಾವ ಯಾವ ಯೋಜನೆಗೆ ಒದಗಿಸುತ್ತೇವೆ ಮತ್ತು ಯಾವ ಯಾವ ಜಿಲ್ಲಾಪರಿಷತ್ತಿಗೆ ಎಷ್ಟೆಷ್ಟು ಹಣವನ್ನು ಒದಗಿಸುತ್ತೇವೆ ಎಂಬ ಬಗ್ಗೆ ಮಾಹಿತಿ ಸಿಗುತ್ತದೆ.

ಶ್ರೀ ಪಿ. ರತ್ನಾಕರ್.—ಮಾನ್ಯ ಅಧ್ಯಕ್ಷರೇ, ನನಗೆ ಅವಕಾಶ ಮಾಡಿಕೊಡಿ.

ಅಧ್ಯಕ್ಷರು.—ನಾನು ಅವಕಾಶ ಕೊಡುವುದಿಲ್ಲ. ತಾವು ಕುಳಿತುಕೊಳ್ಳಿ.

ಶ್ರೀ ಯು. ಭೂಪತಿ.—ಈ ರಾಜ್ಯದಿಂದ ಯೋಜನೆ ಮತ್ತು ಯೋಜನೇತರ ಬಾಬತ್ತಿನಲ್ಲಿ ಜಿಲ್ಲಾ ಪರಿಷತ್ತುಗಳಿಗೆ ಖರ್ಚು ಮಾಡತಕ್ಕಂಥ ಹಣ ಏನು ಇದೆ, ಇದಕ್ಕೆ ಸಂಪನ್ಮೂಲಗಳ ವಿಲ್ಲಿಂದ, ಯಾವ ರೀತಿ ಬರುತ್ತದೆ ಅವರ ಬಗ್ಗೆ ಸ್ವಲ್ಪ ವಿವರಣೆ ಬೇಕು.

ಶ್ರೀ ಅಬ್ದುಲ್ ನಜೀರ್ ಸಾಬ್.—ರಾಜ್ಯದ ಯೋಜನೆಗಳಿಗೆ ಯೋಜನಾರಹಿತ ವೆಚ್ಚಗಳಿಗೆ ಹಣ ಹೋಗುವುದು ರಾಜ್ಯದ ಬೊಕ್ಕಸದಿಂದ. ಯಾವ ಯಾವ ಸಂಪನ್ಮೂಲಗಳಿಂದ ಹಣ ಕ್ರೋಢೀಕರಣವಾಗುತ್ತದೆಯೋ, ಆ ರೀತಿಯಲ್ಲಿ ಕ್ರೋಢೀಕರಣವಾಗತಕ್ಕಂಥ ಹಣ ರಾಜ್ಯದ ಬೊಕ್ಕಸದ ಹಣ. ಈ ರಾಜ್ಯದ ಬೊಕ್ಕಸದಿಂದ ಆಯಾಯ ಯೋಜನೆಗಳಿಗೆ ಹಣ ವರ್ಗಾವಣೆ ಆಗುತ್ತದೆ. ಆಹಾರ ವಿತರಣೆಯು ಕಾರ್ಯ, ಇದಕ್ಕೆ ಸಾಕಷ್ಟು ಹಣ ಇದೆ. ಸಾಕಷ್ಟು ಯೋಜನೆ ತಯಾರಾಗಿದೆ. ಸರಕಾರಿ ಮಟ್ಟದಲ್ಲಿ, ಅವರ ಅಧಿಕಾರದಲ್ಲಿ ಇದೆ. ನಮ್ಮ ಶಾಸನದ ಪ್ರಕಾರ ಹಣ ವಿತರಣೆಯು ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯಿತಿ ಸಿಬ್ಬಂದಿ ಅವರಿಗೆ ಇಷ್ಟಿರತಕ್ಕಂಥ ಹಣ ವರ್ಗಾವಣೆ ಆಗುತ್ತದೆ. ಈ ದೃಷ್ಟಿಯಿಂದ ಹಣ ಹೋಗುತ್ತದೆ ಏಂದು ಹೇಳಿದ್ದೇನೆ.

ಶ್ರೀ ಯು. ಭೂಪತಿ.—ಇದರಲ್ಲಿ ಏನಾಗಿದೆ ಎಂದರೆ ೯೦೦ ಕೋಟಿ ರೂಪಾಯಿಗಳನ್ನು ಜಿಲ್ಲಾ ಪರಿಷತ್ತು ಮಂಡಲ ಪಂಚಾಯಿತಿಗಳಿಗೆ ಕೊಡಲಾಗಿದೆ ಎಂದು ಹೇಳಿಕೆ ಬಂದಿರುವುದರಿಂದ ಜನಗಳ ತಲೆಯಲ್ಲಿ ಏನು ಭಾವನೆ ಬಂದಿದೆ ಎಂದರೆ ಸರ್ಕಾರದಿಂದ ನಮ್ಮ ಜಿಲ್ಲಾ ಪರಿಷತ್ತಿಗೆ ಮತ್ತು ಮಂಡಲ ಪಂಚಾಯಿತಿಗೆ ಹಣ ಬರುತ್ತದೆ ಎನ್ನುವ ಭಾವನೆ ಬಂದುಬಿಟ್ಟಿದೆ. ಈ ಕಾರಣದಿಂದ ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡಿದ್ದೀರಿ. ಆದ್ದರಿಂದ ಇದರ ಬಗ್ಗೆ ವಿವರಣೆ ಬೇಕು ಎಂದು ನಾನು ಕೇಳಿದ್ದು ದು.

ಶ್ರೀ ಅಬ್ದುಲ್ ನಜೀರ್ ಸಾಬ್.—ಮಾನ್ಯ ಸದಸ್ಯರ ಮಾನಸ್ಸಿನಲ್ಲಿ ಗೊಂದಲ ಇದೆ. ಸರ್ಕಾರ ನೇರವಾಗಿ ಹೋಗುವುದು ಎಂದರೆ ಹೇಗೆ ? ನಜೀರ್‌ಸಾಬ್‌ರವರು ತಲೆಯ ಮೇಲೆ ದುಡ್ಡನ್ನು ತೆಗೆದುಕೊಂಡು ಬಳ್ಳಾರಿ ಪಂಚಾಯಿತಿಗೆ ಹೋಗಿ ಕೊಡುವುದು ಇಲ್ಲ. ಶಾಸನಬದ್ಧವಾಗಿ ಇಷ್ಟೊತ್ತು ಖರ್ಚು ಮಾಡುತ್ತಿದ್ದೇವೆ. ಟ್ರಜರಿಯಲ್ಲಿ ಹಣ ಇದೆ, ಖರ್ಚು ಮಾಡುತ್ತಿದ್ದೇವೆ. ಈ ಯೋಜನೆಗೆ ಹಣ ಖರ್ಚು ಮಾಡುವ ಅಧಿಕಾರ ಮಾತ್ರ ವರ್ಗಾವಣೆ ಆಗುತ್ತದೆ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ :—ಮತ್ತೆ ಗೈರುಹಾಜರಿ.

ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು

ಶ್ರೀ ವಿ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ಲಿಖಿತ ಮೂಲಕ ಉತ್ತರಿಸುವ ಉತ್ತರಗಳ ಪಟ್ಟಿಯನ್ನು ಸಭೆಯ ಮುಂದೆ ಇಡುತ್ತೇನೆ.

ಅಧ್ಯಕ್ಷರು.—ಉತ್ತರಗಳ ಪಟ್ಟಿಯನ್ನು ಸಭೆಯ ಮುಂದೆ ಇಡಲಾಯಿತು.

ಬೆಂಗಳೂರಿನ ನಗರಪಾಲಿಕೆಯವರು ಆಸ್ತಿ ತೆರಿಗೆಯನ್ನು ಪುನರ್‌ವಿಮರ್ಶಿಸುವ ಬಗ್ಗೆ

೧೨೪ (೪೯೩) ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್.—ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು, ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಬೆಂಗಳೂರಿನ ನಗರಪಾಲಿಕೆಯವರು ಆಸ್ತಿ ತೆರಿಗೆಯನ್ನು ಪುನರ್ ವಿಮರ್ಶಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?